





*ಪುಟಗಳು* : 72 *ಬೆಲೆ* : 10/




*ಪುಟಗಳು* : 68 *ಬೆಲೆ* : 10/




*ಪುಟಗಳು* : 52 *ಬೆಲೆ* : 10/

*ಕೃತಿ* : **ಶ್ರೀರಾಮಕೃಷ್ಣ ದರ್ಶನ, ಸ್ವಾಮಿ ವಿವೇಕಾನಂದ ವಿವೇಚನೆ, ಶ್ರೀಶಾರದಾ ಸೌರಭ** *ಲೇಖಕರು* : **ಡಾ. ಸಿ.ಪಿ.ಕೆ.**
*ಪ್ರಕಾಶಕರು* : **ಅಖಿಲ ಭಾರತ ದೇಜಗೌ ಸಾಂಸ್ಕೃತಿಕ ಟ್ರಸ್ಟ್ (ನೋಂ.), ವಿಜಯನಗರ 1ನೇ ಹಂತ, ಜಿಲ್ಲಾ ಕನ್ನಡ ಸಾಹಿತ್ಯ ಭವನ ರಸ್ತೆ, ಕುವೆಂಪು ಟ್ರಸ್ಟ್ ಹತ್ತಿರ, ಮೈಸೂರು - 570 012** *ವಿತರಕರು: ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು-4*

ಪುಸ್ತಕ ಪರಿಚಯ

# ಡಾ. ಸಿ.ಪಿ.ಕೆ.ಯವರ ಮೂರು ಕೃತಿಗಳು

ಶ್ರೀರಾಮಕೃಷ್ಣ ಪರಮಹಂಸರು, ಶ್ರೀಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರು - ಇವರನ್ನು 'ದಿವ್ಯತ್ರಯರು' ಎಂದೇ ಕರೆಯುವುದು ವಾಡಿಕೆ. ಮೂವರೂ ಆಧುನಿಕ ಯುಗದಲ್ಲಿ ಅವತರಿಸಿ ಬಂದ ಅಸಾಧಾರಣ ದೈವೀ ವ್ಯಕ್ತಿತ್ವಗಳು. ಇವರನ್ನು ಕುರಿತು ಕನ್ನಡದಲ್ಲಿ ಈಗಾಗಲೇ ಪ್ರಕಟವಾಗಿರುವ ಜೀವನ ಚರಿತ್ರೆ, ಉಪದೇಶ ಸಂಕಲನ, ವಿಚಾರ-ವಿಮರ್ಶೆ ಹೀಗೆ ವಿಭಿನ್ನ ವಿಷಯಗಳಿರುವ ಸಾಹಿತ್ಯರಾಶಿಗೆ ಸೇರ್ಪಡೆಯಾಗಬಲ್ಲ ಮೂರು ಮೌಲಿಕ ಕೃತಿಗಳನ್ನು ಡಾ.ಸಿ.ಪಿ.ಕೆ.ಯವರು ಕನ್ನಡ ಜನತೆಗೆ ನೀಡಿದ್ದಾರೆ. 'ಶ್ರೀರಾಮಕೃಷ್ಣ ದರ್ಶನ', 'ಶ್ರೀಶಾರದಾ ಸೌರಭ', 'ಸ್ವಾಮಿ ವಿವೇಕಾನಂದ ವಿವೇಚನೆ' — ಈ ಮೂರು ಪುಸ್ತಕಗಳನ್ನು ಅಖಿಲ ಭಾರತ ದೇಜಗೌ ಸಾಂಸ್ಕೃತಿಕ ಟ್ರಸ್ಟ್ ಪ್ರಕಟಿಸಿದೆ. ದಿವ್ಯತ್ರಯರನ್ನು ಕುರಿತ ಲೇಖನಗಳು, ಅನುವಾದಿತ ಲೇಖನಗಳು, ಕವಿತೆಗಳು ಈ ಮೂರು ಪುಸ್ತಕಗಳಲ್ಲಿವೆ.

## ೧. 'ಶ್ರೀರಾಮಕೃಷ್ಣ ದರ್ಶನ'

ಶ್ರೀರಾಮಕೃಷ್ಣರನ್ನು ಕುರಿತ ಎಂಟು ಲೇಖನಗಳ ಸಂಕಲನವಿದು. ಲೇಖಕರೇ ಮುನ್ನುಡಿಯಲ್ಲಿ ಬರೆದಿರುವಂತೆ, ಇವುಗಳಲ್ಲಿ ನಾಲ್ಕು ಇಂಗ್ಲಿಷಿನ ಅನುವಾದ; ಉಳಿದವು ಲೇಖಕರ ಸ್ವಂತ ರಚನೆಗಳು. 'ಶ್ರೀರಾಮಕೃಷ್ಣರ ಜೀವನ ಸಂಕ್ಷೇಪ'ವೆಂಬ ಲೇಖನ ಹೆಚ್ಚು ದೀರ್ಘವಾಗಿದ್ದು, ೨೦ ಪುಟಗಳಷ್ಟು ವ್ಯಾಪಕವಾಗಿದೆ. ಸರಳತೆಯೇ ಮೂರ್ತಿವೆತ್ತ ಮಹಾಪುರುಷನ ಕಥೆಯನ್ನು ಹೇಳುವಾಗ ಲೇಖಕರ ಶೈಲಿಯೂ ಸರಳವಾಗಿದೆ. ಇದಕ್ಕೆ ಒಂದು ಉದಾಹರಣೆ: ''ಶ್ರೀರಾಮಕೃಷ್ಣರು ಮಥುರನೊಡನೆ ವಾಯವ್ಯ ಭಾರತದ ಪವಿತ್ರ ಸ್ಥಳಗಳಿಗೆ ದೊಡ್ಡ ತಂಡದೊಡನೆ ಯಾತ್ರೆ ಹೋದರು. ದಿಯೋಗರ್‌ದಲ್ಲಿ ಅವರಿಗೆ ವೈದ್ಯನಾಥ-ಶಿವನ ದರ್ಶನವಾಯಿತು. ಆಮೇಲೆ ಶ್ರೀರಾಮಕೃಷ್ಣರು ಸನಿಹದ ಜನರ ಬಡತನದಿಂದ ತೀವ್ರ ವಿಚಲಿತರಾಗಿ, ಅವರ ಹೊಟ್ಟೆ, ಬಟ್ಟೆಗಾಗಿ ಮಥುರ ಏನಾದರೂ ವ್ಯವಸ್ಥೆ ಮಾಡುವತನಕ ಆ ಜಾಗವನ್ನು ಬಿಡಲು ನಿರಾಕರಿಸಿದರು. ಮುಂದಿನ ಯಾತ್ರೆಗೆ ಹಣದ ಅಗತ್ಯವಿದ್ದುದರಿಂದ, ಮಥುರ ಪ್ರತಿಭಟಿಸಿದ; ಆದರೆ ಕಡೆಗೆ ಅವನು ಶ್ರೀರಾಮಕೃಷ್ಣರ ಒತ್ತಾಯಕ್ಕೆ ಮಣಿಯಬೇಕಾಯಿತು. ಸಮಸ್ತ ಮನುಕುಲದ ಬಗೆಗೆ ಶ್ರೀರಾಮಕೃಷ್ಣರಿಗಿದ್ದ ಅಸಾಧಾರಣ ಪ್ರೀತಿಯನ್ನು ಈ ಘಟನೆ ತೋರಿಸಿಕೊಡುತ್ತದೆ. ಅವರು ಹೇಳುತ್ತಿದ್ದರು: 'ಮನುಷ್ಯನನ್ನು ಶಿವನೆಂದೇ ತಿಳಿದು ಅವನಿಗೆ ಸೇವೆ ಸಲ್ಲಿಸಬೇಕು.' '' (ಪು ೧೧- ೧೨) ಇಲ್ಲಿ 'ದಿಯೋಗರ್' ಎಂದು ಇಂಗ್ಲಿಷಿನ ರೂಪವನ್ನೇ

ಕನ್ನಡದಲ್ಲಿ ಬಳಸುವ ಬದಲು, ಆ ಸ್ಥಳದ ನಿಜವಾದ ಹೆಸರು 'ದೇವಘರ್' ಎಂದೇ ಇಟ್ಟಿದ್ದರೆ ಚೆನ್ನಾಗಿತ್ತು ಅನಿಸುತ್ತದೆ. 'ಅನನ್ಯ ಶ್ರೀರಾಮಕೃಷ್ಣ' ಎಂಬುದು ಸ್ವಾಮಿ ಸ್ವಾಹಾನಂದರ ಲೇಖನದ ಅನುವಾದ. ಇದರ ಶೈಲಿಯೂ ಸರಳ. ಆದರೆ ಮುಂದೆ ಬರುವ ಸ್ವಾಮಿ ಭಜನಾನಂದರ 'ಅವ್ಯಕ್ತ ಶ್ರೀರಾಮಕೃಷ್ಣ' ('Rama krishna, the Unknown') ಎಂಬ ಲೇಖನದ ಶೈಲಿ ಮಾತ್ರ ತದ್ವಿರುದ್ಧ. ಮೂಲ ಲೇಖನವೂ ಹಾಗೆಯೇ – ಅಲ್ಲಿನ ಚಿಂತನೆ, ಶೈಲಿ, ಭಾಷಾಭಿವ್ಯಕ್ತಿಗಳು ಗಂಭೀರ ಹಾಗೂ ಆಳವಾಗಿವೆ; ಅದಕ್ಕನು ಗುಣವಾಗಿ ಅನುವಾದ ಶೈಲಿಯೂ ದೀರ್ಘ ಪದ–ವಾಕ್ಯ ಪುಂಜ ಗಳಿಂದ ಕೂಡಿದ್ದು, ಸುಲಭಗ್ರಾಹ್ಯವಾಗಿಲ್ಲದೆ, ತುಸು ಪ್ರಯತ್ನ ಹಾಗೂ ಚಿಂತನೆಯನ್ನು ಬೇಡುತ್ತದೆ.

'ಶ್ರೀರಾಮಕೃಷ್ಣರ ಹಾಸ್ಯಪ್ರಜ್ಞೆ' ಎಂದು ಡಾ. ಸಿ.ಪಿ.ಕೆ. ಯವರ ಸ್ವಂತ ಬರಹ. ಲೇಖನದ ವಿಷಯವೇ ಕುತೂಹಲಕರ ವಾದುದು; ಶ್ರೀರಾಮಕೃಷ್ಣರ ಜೀವನ, ಸಂದೇಶಗಳಿಂದ ಆಯ್ದ ಹಲವು ಘಟನೆಗಳು ಹಾಗೂ ಪ್ರಸಂಗಗಳನ್ನು ವಿವರಿಸುತ್ತ, ಹಾಸ್ಯದ ಮೂಲಕವೂ ಆಧ್ಯಾತ್ಮಿಕ ವಿಚಾರಗಳನ್ನು ಮನಮುಟ್ಟು ವಂತೆ ತಿಳಿಸಿಕೊಡಬಹುದು ಎನ್ನುತ್ತಾರೆ ಲೇಖಕರು. 'ಕಥಾಮೃತ ವೇಕೆ ಅಷ್ಟು ಜನಪ್ರಿಯ?' ಎಂಬುದು ಸ್ವಾಮಿ ಸ್ವಾಹಾನಂದರ ಇನ್ನೊಂದು ಲೇಖನದ ಅನುವಾದ. 'ಶ್ರೀರಾಮಕೃಷ್ಣ ಸಂದೇಶ ಶ್ರೀ' ಲೇಖಕರ ಸ್ವಂತ ಲೇಖನ. 'ಶ್ರೀರಾಮಕೃಷ್ಣ ಚಳುವಳಿ' (ಅನುವಾದ) ಹಾಗೂ 'ಕವಿ–ಕಲಾವಿದ ಶ್ರೀರಾಮಕೃಷ್ಣ' – ಇವೆ ರಡೂ ಸಣ್ಣ ಲೇಖನಗಳು. ಕೃತಿಯ ಕೊನೆಯಲ್ಲಿ 'ಅವತಾರ ವರಿಷ್ಠ' ಎಂಬ ಕವಿತೆಯೂ ಇದೆ; ಈ ಸುನೀತವು ಪುಸ್ತಕದ ಹೂರಣವಾಗಿ, ಕೃತಿಯ ಆಭರಣವಾಗಿದೆ.

## ೨. 'ಶ್ರೀಶಾರದಾ ಸೌರಭ'

ಈ ಗ್ರಂಥವನ್ನೊಂದು ಸಂಕಲನ ಗ್ರಂಥವೆನ್ನಬಹುದು. ಲೇಖ ಕರು ಮುನ್ನುಡಿಯಲ್ಲಿ ಬರೆಯುತ್ತಾರೆ: 'ಇಲ್ಲಿ ಮೊದಲನೆಯದು ಮಾತ್ರ ನನ್ನದು; ಉಳಿದವು ಇತರ ಕೆಲವರು ಪೂಜ್ಯರ – ಮುಖ್ಯ ವಾಗಿ ಕುವೆಂಪು – ಬರಹಗಳು ಮತ್ತು ಕವನಗಳು.'' ಮೊದ ಲನೆಯದಾಗಿ ಬರುವ 'ಜೀವನ ವೃತ್ತ–ಸೂಕ್ತ' ವೆಂಬ ಲೇಖನವೇ ಪುಸ್ತಕದ ಅರ್ಧಭಾಗದಷ್ಟು ದೀರ್ಘವಾಗಿದೆ. ಶ್ರೀಮಾತೆ ಶಾರದಾ ದೇವಿಯವರ ಸಂಕ್ಷಿಪ್ತ ಜೀವನವನ್ನಿಲ್ಲಿ ನಿರೂಪಿಸಲಾಗಿದೆ. ಒಂದು ವಿಶೇಷವೇನೆಂದರೆ, ಲೇಖಕರು ಸಂಕ್ಷಿಪ್ತವಾಗಿ ಬರೆಯುವ ಬರಹ ಗಳೆಲ್ಲ ಅತ್ಯಂತ 'ಹಿತಮಿತಮೃದು ವಚನ'ವಾಗಿರುತ್ತವೆ; ಸರಳವೂ ಸುಲಭಗ್ರಾಹಿಯೂ ಆಗಿರುತ್ತವೆ! ಉದಾಹರಣೆಗೆ: ''ಶಾರದಾ ದೇವಿಯೆಂಬ ಮೊಗ್ಗು ಶ್ರೀರಾಮಕೃಷ್ಣರಿಂದ ಅರಳಿದ್ದು ನಿಜ; ಆದರೆ ಸೌರಭ ಅದರದೇ ಆಗಿತ್ತು, ಹುಟ್ಟಿನಿಂದ ಬಂದುದಾಗಿತ್ತು.'' (ಪು.೭). ಕೊನೆಯಲ್ಲಿ 'ಶಾರದಾಸೂಕ್ತ'ವಿದೆ. 'ಸೂಕ್ತ'ವೆಂದರೆ ವೈದಿಕ ಮಂತ್ರವಲ್ಲ, ಇಲ್ಲಿರುವುದು ಶ್ರೀಮಾತೆಯವರ ಉಪದೇಶ ಗಳ ಸಂಗ್ರಹ. ಮುಂದೆ ಕುವೆಂಪು ಅವರು ಶ್ರೀಮಾತೆಯವರನ್ನು ಕುರಿತು ಬರೆದ 'ಸುಮಧುರ, ಸುಪ್ರಶಾಂತ' ಎಂಬ ಲೇಖನ, 'ಕೃಪಾಮಯಿ' ಎಂಬ ಸ್ವಾಮಿ ಪುರುಷೋತ್ತಮಾನಂದರ ಲೇಖನ, 'ಸಂಜೀವಿನಿ' ಎಂಬ ಸ್ವಾಮಿ ಸೋಮನಾಥಾನಂದರ ಲೇಖನಗಳು ಸೇರ್ಪಡೆಯಾಗಿವೆ. ನಂತರ ಸ್ವಾಮಿ ವಿವೇಕಾನಂದರು ಹಾಗೂ ಸೋದರಿ ನಿವೇದಿತಾ ಇವರ ಎರಡು ಪತ್ರಗಳಿಂದ ಆಯ್ದ ಭಾಗ ಗಳನ್ನು ಕೊಡಲಾಗಿದೆ. ಇಲ್ಲಿ ಶ್ರೀಮಾತೆಯವರನ್ನು ಕುರಿತು ಅವರ ಭಾವನೆಗಳು ವ್ಯಕ್ತವಾಗಿವೆ. ಮುಂದೆ ಕುವೆಂಪು ಅವರ 'ಮಹಾ ಮಾತೆ' ಎಂಬ ಕವನ, ಡಾ. ಜಿ.ಎಸ್.ಶಿವರುದ್ರಪ್ಪ ಅವರ 'ಚಂದ್ರಿಕೆ' ಎಂಬ ಕವನ, ಲೇಖಕರೇ ಬರೆದ 'ತಂಬೆಳಕು' ಎಂಬ ಸುನೀತ ಕವನಗಳಿವೆ. ಇಂಥ ವೈವಿಧ್ಯಮಯವಾದ ರಚನೆಗಳು ಈ ಸಂಗ್ರ ಹದ ಶ್ರೀಮಾತೆಯವರ ಜೀವನ ಸಂದೇಶ ಹಾಗೂ ಅವರ ಮಹಿಮೆಯನ್ನು ಬಿಂಬಿಸುವಲ್ಲಿ ಅತ್ಯಂತ ಸಹಾಯಕವಾಗಿವೆ.

## ೩. 'ಸ್ವಾಮಿ ವಿವೇಕಾನಂದ ವಿವೇಚನೆ'

ಈ ಕೃತಿಯಲ್ಲಿ ಸ್ವಾಮಿ ವಿವೇಕಾನಂದರನ್ನು ಕುರಿತ ಆರು ಲೇಖನಗಳಿವೆ. ಮೊದಲಿಗೆ 'ಜೀವನ ಚರಿತ್ರೆ'. ಅದು ಲೇಖಕರ ಸ್ವಂತ ಬರಹ. ಕೇವಲ ಐದೇ ಪುಟಗಳ ಈ ಜೀವನ ಚರಿತ್ರೆ ಸ್ವಾಮೀಜಿ ಜೀವನದ ಒಂದು ಪಕ್ಷಿನೋಟ ಮಾತ್ರ. ಮುಂದಿನ ಲೇಖನಗಳೆಲ್ಲ ಸ್ವಾಮೀಜಿ ಜೀವನ, ಸಾಧನೆ, ಸಂದೇಶಗಳನ್ನು ಬಿತ್ತರಿಸುವ ವಿವಿಧ ಬರಹಗಳು. ಇವುಗಳಲ್ಲಿ ಎರಡು ಸ್ವಾಮಿ ಲೋಕೇಶ್ವರಾನಂದರ ಹಾಗೂ ಸ್ವಾಮಿ ತಥಾಗತಾನಂದರ ಲೇಖನ ಗಳ ಅನುವಾದ; 'ವಿವೇಕಾನಂದರನ್ನು ಕುರಿತು ಸುಭಾಷ್ ಚಂದ್ರ ಬೋಸ್' ಎಂಬ ಲೇಖನವೂ ಅನುವಾದ. ಉಳಿದಂತೆ 'ಸ್ವಾಮಿ ವಿವೇಕಾನಂದರು: ಹೊಸ ದೃಷ್ಟಿ–ಹೊಸ ಸೃಷ್ಟಿ', 'ಸಾಹಿತಿ, ಕಲಾ ವಿಮರ್ಶಕ ವಿವೇಕಾನಂದರು' ಲೇಖಕರ ಸ್ವಂತ ರಚನೆಗಳು. ಎರಡನೆಯ ಲೇಖನ ಸ್ವಾಮೀಜಿಯವರ ವ್ಯಕ್ತಿತ್ವದ ಕಲಾತ್ಮಕ ಮುಖವನ್ನು ಪರಿಚಯಿಸುತ್ತದೆ; ಜೊತೆಗೆ ಅವರ ಕಲೆ, ಸಾಹಿತ್ಯದ ಚಿಂತನೆ ನಡೆಸುತ್ತದೆ.

ಡಾ. ಸಿ.ಪಿ.ಕೆಯವರ ಈ ಮೂರೂ ಕೃತಿಗಳ ಸಾಮಾನ್ಯ ಲಕ್ಷಣವಿದು: ಸ್ವಂತ ಲೇಖನ ಹಾಗೂ ಅನುವಾದ ಇವೆರಡನ್ನೂ ಸೇರಿಸಿಕೊಂಡ ಸಂಕಲನಗಳಿವು. ಸ್ವತಂತ್ರ ಗ್ರಂಥವೊಂದರ ಕ್ರಮ ಬದ್ಧ ಜೋಡಣೆಯಾಗಲಿ, ಹಂತಹಂತವಾಗಿ ವಿವಿಧ ಅಧ್ಯಾಯ ಗಳೊಂದಿಗೆ ಬೆಳೆಯುತ್ತ ವಿಸ್ತರಿಸುತ್ತ ಹೋಗುವ ನಿರೂಪಣೆಯ ಕ್ರಮವಾಗಲೀ ಇಲ್ಲಿಲ್ಲ. ಈಗಾಗಲೆ ಸಿದ್ಧ ಮಾದರಿಯ ವ್ಯಕ್ತಿತ್ವಗಳಿಗೆ ಮೆರಗು ನೀಡುವ ಪ್ರಯತ್ನವೂ ಇಲ್ಲಿನದಲ್ಲ. ಏಕೆಂದರೆ ಮೂರೂ ಕೃತಿಗಳಲ್ಲಿ 'ಸಂಕ್ಷಿಪ್ತ ಜೀವನ'ವನ್ನು ನೀಡಲಾಗಿದೆ. ಆದ್ದರಿಂದ, ಹೊಸ ಓದುಗನೊಬ್ಬನಿಗೆ ನೆರವಾಗಬಲ್ಲ ರೀತಿಯಲ್ಲಿ ದಿವ್ಯ ತ್ರಯರ ಜೀವನ–ಉಪದೇಶ–ಆದರ್ಶಗಳನ್ನು ಈ ವೈವಿಧ್ಯ ಮಯ ಬರಹಗಳ ಮೂಲಕ ಬಿಂಬಿಸುವುದೇ ಲೇಖಕರ ಉದ್ದೇಶ ವೆನಿಸುತ್ತದೆ. ಒಟ್ಟಿನಲ್ಲಿ, ಹೊಸ ಓದುಗರಿಗೂ, ಈಗಾಗಲೇ ದಿವ್ಯ ತ್ರಯರ ಪರಿಚಯವಿರುವವರಿಗೂ ಉಪಯುಕ್ತ ಗ್ರಂಥಗಳಿವು.